# ಮೂರು ದಿನಗಳ ಹದಿಮೂರು ವಿಷಯಗಳು

ಬೆಂಗಳೂರಿನ ಪೂರ್ಣ ಪ್ರಜ್ಞವಿದ್ಯಾಪೀಟದಲ್ಲಿ ಮೂರು ದಿನಗಳ ಕಾಲ ನಡೆದ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನವು ಸಾತ್ವಿಕರೂ, ಆಸ್ತಿಕರೂ ಮರೆಯಲಾರದ ಮಹಾ ಮೇಳ. ಈ ಮೇಳದ ಸುರಸಸಂದರ್ಭಗಳ ಕೆಲವು ಸವಿ ತುಣುಕುಗಳನ್ನು ಜಿ.ಪಿ.ವಿನಯಬಾಬು ಹಾಕಿದ್ದಾರೆ.

(೧) ಜ್ಞಾನದ ಸುಗಂಧವನ್ನು ಬೀರುವ ಪ್ರಭಂಜನ:
ಮಾಧ್ವ ತತ್ವ ಜ್ಞಾನ ಸಮ್ಮೇಳನದ ಆಯೋಜಕರಾದ ಪೇಜಾವರ ಮಠಾಧೀಶ ಶ್ರೀ ವಿಶ್ವೇಶತೀರ್ಥಶ್ರೀಪಾದಂಗಳವರು, ಸಮ್ಮೇಳನದ್ಯಕ್ಷರಾದ ಪ್ರೊ. ವ್ಯಾಸನಕೆರೆ ಪ್ರಭಂಜನಾಚಾರ್ಯರನ್ನು ವರ್ಣಿಸುತ್ತಾ ಸುಜ್ಞಾನವನ್ನು ಜನತೆಗೆ ನೀಡುವ ಪ್ರಭಂಜನ(ಗಾಳಿ)ರಾಗಿದಾರೆ ಇವರು ಎಂದು ವರ್ಣಿಸಿದರು.

(೨) ತತ್ವಜ್ಞಾನಸಕ್ತ ತಂತ್ರಜ್ಞಾನಿಗಳು:
ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಗಳಿಸಿರುವ ಕರ್ನಾಟಕದ ವಿಜ್ಞಾನಿಗಳಾದ ಪ್ರೊ. ಯು.ಆರ್. ರಾವ್, ಪ್ರೊ. ಸಿ.ಎನ್.ರಾವ್ ಹಾಗೂ ಡಾ॥ ರದ್ದ ನರಸಿಂಹ, ಇವರುಗಳನ್ನು ಸಮ್ಮೇಳನದಲ್ಲಿ ಸನ್ಮಾನಿಸಲಾಯಿತು. ಇವರೆಲ್ಲರ ತತ್ವಜ್ಞಾನವು ಸದಾ ತಂತ್ರಜ್ಞಾನಕ್ಕೆ ಪೂರಕವಾಗಿರಬೇಕೆಂದು ನುಡಿದರು. ಬಾಹ್ಯಾಕಾಶ ವಿಜ್ಞಾನಿ ಪ್ರೊ. ಯು.ಆರ್. ರಾಯರು ಉಡುಪಿಯ ಧೂಳಿನಿಂದ ತಾನು ಪಾವನನಾಗಿದ್ದೇನೆ ಎಂದು ಹೇಳಿದರೆ ಟಾಟಾ ಇನ್ಸಟ್ಯೂಟಿನ ನಿರ್ದೇಶಕರಾದ ಪ್ರೊ. ಸಿ.ಎನ್.ಆರ್.ರಾವ್ ಮತ್ತು ಎನ್.ಎ.ಎಲ್. ನಿರ್ದೇಶಕ ಡಾ॥ನರಸಿಂಹ, ತಮಗೆ ಸಮ್ಮೇಳನದ ವಾತಾವರಣವು ಆನಂದವನ್ನು ತಂದಿದೆ ಎಂದು ನುಡಿದರು.

(೩) ದೇಶದ ಪ್ರಮುಖ ಮೂರು ಹುದ್ದೆಗಳಲ್ಲಿ ಧಾರ್ಮಿಕರು:
ಸಮ್ಮೇಳನದ ಮೊದಲ ದಿನದಂದು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಧಾನಿಗಳ ವಾರ್ತಾ ಸಲಹೆಗಾರರಾದ ಪಿ.ವಿ.ಆರ್.ಕೆ. ಪ್ರಸಾದರು ಮಾತನಾಡುತ್ತಾ, ದೇಶದ ಪ್ರಮುಖ ಮೂರು ಹುದ್ದೆಗಳಲ್ಲಿರುವ ರಾಷ್ಟ್ರಪತಿಗಳು, ಪ್ರಧಾನಿಗಳು, ಹಾಗೂ ಸರ್ವೋಚ್ಚ ನ್ಯಾಯಾದೀಶರು ಧಾರ್ಮಿಕ ವ್ಯಕ್ತಿಗಳಾಗಿರುವುದು ನಮ್ಮೆಲ್ಲರ ಭಾಗ್ಯ ಎಂದು ನುಡಿದರು.

(೪) ಕಂಪ್ಯೂಟರಿನ ಸಾರ್ಥಕತೆ:
ಸಮ್ಮೇಳನಾಧ್ಯಕ್ಷರಾದ ಪ್ರೊ. ಪ್ರಭಂಜನಾಚಾರ್ಯರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಮಾಧ್ವ ತತ್ವ ಸಾಹಿತ್ಯದ ಸಂರಕ್ಷಣೆಗೆ ಸಲಹೆಗಳನ್ನು ನೀಡುತ್ತಾ ಈ ದಿಶೆಯಲ್ಲಿ ಕಂಪ್ಯೂಟರಿನ ಬಳಕೆಯಾಗಬೇಕೆಂದು ಒತ್ತಿ ಹೇಳಿದರು. ಇದರಿಂದ ಕಂಪ್ಯೂಟರಿಗೆ ಸಾರ್ಥಕತೆ ದೊರೆಯುತ್ತದೆ ಎಂದರು.

(೫) ಉಪವಾಸಕ್ಕೆ ಉಪವಾಸ:
ಯುವಗೋಷ್ಠಿಯಲ್ಲಿ ಧರ್ಮಾಚರಣೆಯ ಸಾಧಕ–ಬಾಧಕಗಳ ಬಗ್ಗೆ ವಾದ–ವಿವಾದ ಮಾಡಿದ ಎನ್.ವೆಂಕಟೇಶರಾವ್ ಹಾಗೂ ಕೆ.ಎಸ್.ವೆಂಕಟೇಶ್ ಇವರುಗಳು ಧರ್ಮಾನುಸಾರಣೆಗೆ ಆಗಬಹುದಾದ ಅಡ್ಡಿ ಆತಂಕಗಳು ಹಾಗೂ ಅದನ್ನು ನಿವಾರಿಸುವ ರೀತಿಯ ಬಗ್ಗೆ ಚರ್ಚೆ ನಡೆಸಿದರು. ಈಗಿನ ವೈಜ್ಞಾನಿಕ ಯುಗದಲ್ಲಿ ಶ್ರೇಷ್ಟ ಧರ್ಮ ಪದ್ದತಿಗಳಾದ ಸಂಧ್ಯಾವಂದನೆ, ಪೂಜೆ, ಉಪವಾಸ ಮುಂತಾದವುಗಳಿಗೆ ಉಪವಾಸ ಹಾಕಬೇಕಾಗಿರುವ ಸಂದರ್ಭ ಬಂದಿದೆ ಎಂದು ವೆಂಕಟೇಶರಾವ್ ವಾದ ಮಂಡಿಸಿದರೆ, ಮಾನವನಿಗೆ ದಿನದಲ್ಲಿ ಇರುವ ೨೪ ಘಂಟೆಗಳಲ್ಲಿ ಕೇವಲ ಅರ್ಧ ಮುಕ್ಕಾಲು ಗಂಟೆಗಲ ಕಾಲ ಸಂಧ್ಯವಂದನೆ, ದೇವತಾಚರಣೆ ಸಾಧ್ಯ ಎಂಬ ಪ್ರತಿವಾದ ಮಂಡಿಸಿದರು. ಇದೇ ಗೋಷ್ಟಿಯಲ್ಲಿ ಮಾತನಾಡಿದ 'ಪ್ರಭಾತ ಕಲಾವಿದರು'

ನೃಥ್ಯನಾಟಕತಂಡದ ಮಾಲೀಕರಾದ ಶ್ರೀ ಜೆ.ರಾಘವೇಂದ್ರರಾಯರು, ತಮ್ಮ ವಿದೇಶ ಪ್ರವಾಸಗಳಲ್ಲಿ ಕಂಡ ಅಪೂರ್ವ ಅನುಭವಗಳನ್ನು ವಿವರಿಸಿದರು.

(೬) ಹರಿದಾಸರು – ಫ್ಯಾಮಿಲಿ ಫಿಸಿಶಿಯನ್
ದಾಸಸಾಹಿತ್ಯ ಗೋಷ್ಠಿಯಲ್ಲಿ ಮಾತನಾಡಿದ ಪ್ರೊ.ವಸಂತಕುಷ್ಟಗಿಯವರು, ಹರಿದಾಸರನ್ನು ಫ್ಯಾಮಿಲಿಫಿಸಿಶಿಯನ್ ಗೆ ಹೋಲಿಸಿದರು. ಫ್ಯಾಮಿಲಿಫಿಸಿಯನ್ ಗಳು, ಸಾಮಾನ್ಯ ರೋಗಗಳಿಗೆ ಮದ್ದು ನೀಡಿದರೆ, ಹರಿದಾಸರು ತಮ್ಮ ಮಾತಿನ ಜ್ಯೋತಿರ್ಲಿಂಗದಿಂದ ಭವರೋಗಗಳನ್ನು ನಿವಾರಣೆ ಮಾಡುತ್ತಿದ್ದರು ಎಂದು ಅವರು ನುಡಿದರು.

(೭) ಸುಬ್ರಹ್ಮಣ್ಯ ಸ್ವಾಮಿಗಳು: ದಾಸಪಂತ ಹೆಚ್ಚು ಒಪ್ಪುತ್ತದೆ
ಕುಕ್ಕೆ ಸುಬ್ರಹ್ಮಣ್ಯ ಮಠಾಧೀಶರಾದ ಶ್ರೀ ವಿದ್ಯಾಭೂಷಣ ತೀರ್ಥ ಶ್ರೀಪಾದರು. ತಮಗೆ ಸಂನ್ಯಾಸಿ ಪಂಥಕ್ಕಿಂತ ದಾಸ ಪಂತ ಹೆಚ್ಚು ಒಪ್ಪುತ್ತದೆ ಎಂದು ನುಡಿದರು. ದಾಸರ ಪದಗಳನ್ನು ಹಾಡುತ್ತಾ ತಾವು ಹರಿದಾಸ ಸಾಹಿತ್ಯ ಪ್ರಚಾರಕ್ಕೆ ಊರೂರು ಸಂಚರಿಸುವುದಾಗಿಯು ಅವರು ನುಡಿದರು.

(೮)ಪೂರ್ವಾಲಯರ ಪೂರ್ವಾಲಯರು:
ಭಂಡಾರಕೇರಿ – ಫಲಿಮಾರು ಮಠಾಧೀಶರಾದ ಶ್ರೀಶ್ರೀ ವಿಧ್ಯಾಮಾನ್ಯ ತೀರ್ಥರು ರಜತತುಲಾಭಾರಕ್ಕೆ ಮುನ್ನ ಪೇಜಾವರ ಶ್ರೀಗಳನ್ನು ಪೂರ್ವಾಲಯರು (ಮೊದಲು ಆರಾಧಿಸಲ್ಪಡುವವರು) ಎಂದು ವರ್ಣಿಸಿದರು. ಆದರೆ ಪೇಜಾವರ ಶ್ರೀಗಳಿಗೆ ವಿಧ್ಯಾ ಗುರುಗಳಾದ ಭಂಡಕೇರಿ – ಫಲಿಮಾರು ಮಠಾದೀಶರು ಪೂರ್ವಾಲಯರ – ಪೂರ್ವಾಲಯರು ಎಂದು ವಿದ್ವಾನ್ ಹರಿದಾಸ ಭಟ್ಟರು ಸಮ್ಮೇಳನದಲ್ಲಿ ಘೋಷಿಸಿದರು.
(೯) ೫೬೪ ಸೂತ್ರಗಳ ಅನುವ್ಯಾಖ್ಯಾನ:
ಶ್ರೀ ಮದನುವ್ಯಾಖ್ಯಾನದಲ್ಲಿ ೫೬೪ ಸೂತ್ರಗಳಿದ್ದು ಅದರ ವೈಶಿಷ್ಟವೇನೆಂದು ಬಾಳಗಾರು ಮಠಾದೀಶರಾದ ಶ್ರೀಶ್ರೀ ರಘುಭೂಷಣ ತೀರ್ಥರು ವಿವರಿಸಿದರು. ೪ ರಿಂದ ೬ನ್ನು ನಿಗ್ರಹಿಸಿಕೊಂಡು ೫ನ್ನು ಪಡೆಯುವುದೇ ಅನುವ್ಯಾಖ್ಯಾನದ ಸಾರ ಎಂದು ಅವರು ನುಡಿದರು. ೪ ಎಂದರೆ ನಾಲ್ಕು ವೇದಗಳು. ಇವುಗಳ ಜ್ಞಾನದಿಂದ ೬ನ್ನು ಅಂದರೆ ಅರಿಷಡ್ವರ್ಗಗಳನ್ನು ನಿಗ್ರಹಿಸಿಕೊಂಡು ೫ನ್ನು ಅಂದರೆ ಪಂಚಸ್ವರೂಪವನ್ನು ಪಡೆಯುವುದು.

(೧೦) ರಾಘವೇಂದ್ರ ಸ್ವಾಮಿಗಳಿಂದ ವಿದ್ಯಾರ್ಥಿಗಳಿಗೆ ಸನ್ಮಾನ:
ರಾಘವೇಂದ್ರ ಮಠಾದೀಶರಾದ ಶ್ರೀಶ್ರೀ ಸುಶಮೀಂದ್ರ ತೀರ್ಥರು ನ್ಯಾಯಸುಧಾ ಮಂಗಳದಲ್ಲಿ ಪಾಲ್ಗೊಂಡ ೨೧ ವಿಧ್ಯಾರ್ಥಿಗಲಿಗೆ ಶಾಲು ಹೊದಿಸಿ ಸನ್ಮಾನ ಮಾಡಿದರು ಹಾಗೂ ವೇದಿಕೆಯ ಮೇಲಿದ್ದ ಎಲ್ಲಾ ಯತಿಗಳಿಗೂ ಮಠದ ವತಿಯಿಂದ ಸನ್ಮಾನ ಮಾಡಿದರು.

(೧೧) ಮಹಿಳೆಯರು ಹಾಗೂ ಗೌರಿಪೂಜೆ:
ಮಹಿಳೆಯರಿಗೆ ಭಾರತೀಯ ಸಂಸ್ಕೃತಿಯಲ್ಲಿರುವ ಸ್ಥಾನಮಾನಗಳನ್ನು ವಿವರಿಸುತ್ತಾ ಪೇಜಾವರ ಶ್ರೀಗಳು, ಮಹಿಳೆಯರು ಗೌರಿಪೂಜೆಯನ್ನು ಮಾಡಿ ಒಳ್ಳೆಯ ಗಂಡನನ್ನು ಪದೆಯುತ್ತಾರೆ, ಆದರೆ ಗಂಡಸರು ಒಳ್ಳೆಯ ಹೆಂಡತಿಯನ್ನು ಪಡೆಯಲು ಯಾವುದೇ ಪೂಜೆ ಮಾಡುವುದಿಲ್ಲ. ಏಕೆಂದರೆ ಹೆಂಗಸರೆಲ್ಲರೂ  ಒಳ್ಳೆಯವರು ಹಾಗೂ ಪವಿತ್ರರು ಎಂದು ಮಹಿಳೆಯರ ಹಿರಿಮೆಯನ್ನು ತಿಳಿಸಿದರು.

(೧೨) ಮಹಿಳಾಗೋಷ್ಟಿ:
ಮಹಿಳಾಗೋಷ್ಟಿಯ ಅಧ್ಯಕ್ಷರಾದ ಶ್ರೀಮತಿ ಹೇಮಲತ ಮಹಿಷಿಯವರು ಮಾತನಾಡಿ, ವೇದ ಪುರಾಣಗಲಲ್ಲಿ

ಮಹಿಳೆಯರಿಗೆ ಆದ್ಯತೆ ಮನ್ನನೆ ನೀಡಿದದರೂ, ಗತಕಾಲದ ವೈಭವವನ್ನು ನೆನೆಯುತ್ತಾ ಕುಳಿತಿರದೇ ಮುಂದೆ ಮಾಡುವ ಕಾರ್ಯದ ಬಗ್ಗೆ ಯೋಚಿಸಬೇಕು ಎಂದರು. ಇದೇ ಸಂದರ್ಭದಲ್ಲಿ ಮಾತನಾಡಿದ ಶ್ರೀಮತಿ ರುಕ್ಮಿಣಿ ಗಿರಿಮಾಜಿಯವರು 'ಹೆಣ್ಣಿನ ಸತತಿ ಸಾವಿರವಾಗಲಿ ದಂಡಿಗೆ ಬೆತ್ತವ ಹಿಡಿಸಿದಳಯ್ಯ' ಎಂದು ಹೇಳುತ್ತಾ ದಾಸರ ಪದಗಳಲ್ಲಿ ಹೆಣ್ಣಿಗೆ ನೀಡಿರುವ ವಿಶೇಶ ಸ್ಥಾನವನ್ನು ವಿವರಿಸಿದರು. ಯಜ್ಞ – ಯಾಗಾಧಿ ಪೂಜಾ ಕೈಂಕರ್ಯಗಳಲ್ಲಿ ದಂಪತಿಗಳು ಒಟ್ಟಿಗೆ ಇರಬೇಕು ಎಂಬ ನಿಯಮವೇ ನಮ್ಮ ಸಂಸ್ಕೃತಿಯಲ್ಲಿ ಹೆಣ್ಣಿಗಿರುವ ಮನ್ನಣೆಯನ್ನು ತೋರಿಸುತ್ತದೆ ಎಂದು ಶ್ರೀಮತಿ ಸುಶೀಲಾ ಉಪಾಧ್ಯಾ  ನುಡಿದರು.

(೧೩) ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯದ ಪ್ರಮುಖ ಕಲಾಕಾರರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಶ್ರೀಶ್ರೀ ವಿಧ್ಯಾಭೂಷಣ ತೀರ್ಥರ ಸಂಗೀತ ಕಾರ್ಯಕ್ರಮ, ಪ್ರಭಾತ್ ಕಲಾವಿದರಿಂದ 'ಶ್ರೀನಿವಾಸ ಕಲ್ಯಾಣ' ನಾಟಕ, ಸರಳಾಯ ಸಹೋದರಿಯರಿಂದ ಹಾಡುಗಾರಿಕೆ, ಭದ್ರಗಿರಿ ಅಚ್ಯುತದಾಸರಿಂದ ಹರಿಕಥೆ, ಶ್ರೀಮತಿ ಸುಮಾಸುಧೀಂದ್ರರಾದ ವೀಣಾವಾದನ ಮುಂತಾದ ಅನೇಕ ಕಾರ್ಯಕ್ರಮಗಳು ನಡೆದವು.